ತಾಂತ್ರಿಕ ನಡೆಗಳಾಗಲಿ ಇರುವುದಿಲ್ಲ. ತೆಲುಗು ದೇವದಾಸಿಯರು ಪ್ರಸ್ತುತ ಪಡಿಸುವ ಅಭಿನಯವು ಮುಖ್ಯವಾಗಿ ಸಾತ್ವಿಕ ಅಭಿನಯಕ್ಕೆ ಪೂರಕವಾಗಿ ಒದಗಿಬರುತ್ತದೆ. ಆದ್ದರಿಂದ ಲಭ್ಯಚೌಕಟ್ಟಿನಲ್ಲಿ ನರ್ತಕಿಯು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಅಭಿನಯವನ್ನು ವಿಸ್ತರಿಸುತ್ತ ಸಾಗುತ್ತಾಳೆ. ಆದ್ದರಿಂದ ವಿಲಾಸಿನಿ ನಾಟ್ಯ ಪದ್ಧತಿಯಲ್ಲಿ ವರ್ಣಂ ಒಂದು ಅಭಿನಯವಾಗಿ ಪ್ರಸ್ತುತಗೊಳ್ಳುತ್ತದೆ. ಅಲ್ಲಿ ನೃತ್ತಕ್ಕೆ ಹೆಚ್ಚಿನ ಆಸ್ಪದವಿಲ್ಲ. ಕೂಚಿಪುಡಿ ನೃತ್ಯದಲ್ಲಿ ವೇಗವೇ ಪ್ರಧಾನವಾಗಿರುವಂತೆ ಗೋಚರಿಸುತ್ತದೆ. ಆದರೆ ಪುರಾತನವಾದ ಈ ನೃತ್ಯ ಪದ್ಧತಿಯಲ್ಲಿ ಅಷ್ಟೇನೂ ಮಾರ್ಪಾಟುಗಳಾಗಿಲ್ಲ ಎನಿಸುತ್ತದೆ. ಒಂದೋ ಗುರುಪರಂಪರೆಯಲ್ಲಿ ಸಾಗಿ ಬಂದ ಸಾಂಪ್ರದಾಯಿಕ ಶೈಲಿ ಅಥವಾ ಹಿರಿಯ ಗುರುಗಳಾದ ವೇಂಪತಿ ಚಿನ್ನಸತ್ಯಂ ಅವರ ಶೈಲಿಯಲ್ಲಿಯೇ ಕೂಚಿಪುಡಿ ಪ್ರದರ್ಶನಗೊಳ್ಳುತ್ತದೆ. ಹೊಸನೀರು ಬರಬೇಕಿದೆಯೆನಿಸುತ್ತದೆ. ಆದರೆ ಪುರುಷಪ್ರಧಾನವಾಗಿದ್ದಾಗ, ಒಂದು ತಂಡವಾಗಿ ಪ್ರಸ್ತುತಗೊಳ್ಳುತ್ತಿದ್ದ ಕೂಚಿಪುಡಿ ನೃತ್ಯಕ್ಷೇತ್ರಕ್ಕೆ ಮಹಿಳೆಯರ ಪ್ರವೇಶವಾದ ಬಳಿಕ, ಏಕವ್ಯಕ್ತಿ ನೃತ್ಯ ಪ್ರದರ್ಶನಗಳು ಹೆಚ್ಚಿವೆ. ಗುರುಗಳಾದ ಸ್ವಪ್ನ ಸುಂದರಿ, ಯಾಮಿನಿ ಕೃಷ್ಣಮೂರ್ತಿ, ಶೋಭಾ ನಾಯ್ಡು, ರಾಜಾರೆಡ್ಡಿ ರಾಧಾರೆಡ್ಡಿ ಮುಂತಾದವರು ಈ ಏಕವ್ಯಕ್ತಿ ಪ್ರದರ್ಶನದ ಸೌಂದರ್ಯ ಹೆಚ್ಚಿಸಿದ್ದಾರೆ. ಅದೇ ರೀತಿ ಭಾಮಾ ಕಲಾಪ, ಯಕ್ಷಗಾನದ ಪ್ರಭಾವವನ್ನು ಅದು ಔಚಿತ್ಯಪೂರ್ಣವಾಗಿ ಸ್ವೀಕರಿಸಿದೆ.

◆ **ಭರತನಾಟ್ಯ ನೃತ್ಯ ಪ್ರಕಾರದಲ್ಲಿ ಚಾಲ್ತಿಯಲ್ಲಿರುವ 'ಮಾರ್ಗಂ' ಮಾದರಿಯಲ್ಲಿಯೇ ವಿಲಾಸಿನಿ ನಾಟ್ಯದಲ್ಲಿಯೂ ಒಂದು ಶೈಲಿ ಇದೆಯೇ?**

ಭರತನಾಟ್ಯದಲ್ಲಿ ಕಂಡು ಬರುವ 'ಮಾರ್ಗಂ' ಅನ್ನು ತಂಜಾವೂರು ಸಹೋದರರು ಆರಂಭಿಸಿದರು. ಸಭಿಕರನ್ನು ಅಥವಾ ರಸಿಕರನ್ನು ಮುಖಾಮುಖಿಯಾಗುತ್ತ ನೃತ್ಯ ಕಾರ್ಯಕ್ರಮದೊಳಗೆ ಅವರ ಮನಸ್ಸನ್ನು ತರುವ ನಿಟ್ಟಿನಲ್ಲಿ ಬಹಳ ತಾರ್ಕಿಕವಾಗಿ ಹಂತಹಂತವಾಗಿ ರೂಪಿಸಲಾದ ಒಂದು ಚಂದದ ವ್ಯವಸ್ಥೆ 'ಮಾರ್ಗಂ'. ಮೊದಲು ಪ್ರೇಕ್ಷಕರಿಗೆ ನೃತ್ಯವನ್ನು, ನೃತ್ಯದ ತಂತ್ರವನ್ನು ಪರಿಚಯಿಸಿ, ಶಬ್ದಂನಲ್ಲಿ ಸ್ವಲ್ಪವೇ ಸಾಹಿತ್ಯವನ್ನು ಪರಿಚಯಿಸಿ, ವಿವರವಾದ ಸಾಹಿತ್ಯವನ್ನು ಅನಂತರದ 'ವರ್ಣಂ'ನಲ್ಲಿ ಪ್ರಸ್ತುತಪಡಿಸಲಾಗುತ್ತದೆ. ನಂತರ ಸಾತ್ವಿಕ ರಸದತ್ತ ಪ್ರೇಕ್ಷಕರನ್ನು ಕೊಂಡೊಯ್ಯುವುದು ವಾಡಿಕೆ.

ವಿಲಾಸಿನಿ ನಾಟ್ಯದಲ್ಲಿ 'ಆಲಯ ಸಂಪ್ರದಾಯ', 'ಕಛೇರಿ ಆಟ' ಮತ್ತು 'ಆಟ ಭಾಗವತಂ' ಸಂಪ್ರದಾಯಗಳನ್ನು ಕಾಣಬಹುದು. ಆಟಭಾಗವತಂ ಒಂಬತ್ತು ರಾತ್ರಿಗಳಲ್ಲಿ ನಡೆಯುವ ದೀರ್ಘವಾದ



ಭಾಗವತ ಕಥಾ ಪ್ರಸ್ತುತಿ. ಸಾಮಾನ್ಯವಾಗಿ ನಾವು ಕಲಾವಿದರು ವೇದಿಕೆಯಲ್ಲಿ ವಿಲಾಸಿನಿ ನಾಟ್ಯವನ್ನು ಪ್ರಸ್ತುತಪಡಿಸುವಾಗ ಈ ಮೂರೂ ಸಂಪ್ರದಾಯದಿಂದ ಒಂದೊಂದು ಪ್ರಸ್ತುತಿಯನ್ನು ಕೈಗೆತ್ತಿಕೊಂಡು, ಪ್ರೇಕ್ಷಕರಿಗೆ ಎಲ್ಲ ಪ್ರಕಾರಗಳ ಕಿಂಚಿತ್ ದರ್ಶನ ದೊರೆಯುವಂತೆ ಮಾಡುತ್ತೇವೆ. ವಿಲಾಸಿನಿ ನಾಟ್ಯ ಕಲಿಕೆಗೆ ಇಂತಹುದೇ ಪೂರ್ವಸಿದ್ಧತಾ ಕಲಿಕೆ ಎಂದೇನೂ ನಿರ್ದಿಷ್ಟ ಅಪೇಕ್ಷೆಗಳಿಲ್ಲ. ಭರತನಾಟ್ಯ ಅಥವಾ ಕೂಚಿಪುಡಿ ಹಿನ್ನೆಲೆ ಇರುವವರು, ಕಥಕ್ ಕಲಿತವರೂ ಈ ನಾಟ್ಯ ಕಲಿತಿದ್ದಾರೆ. ಹಾಗೆ ನೋಡಿದರೆ